# ಪ್ರಸ್ಥಾನತ್ರಯದಲ್ಲಿ ಗೀತೆ

**ಡಾ. ಪ್ರಸನ್ನಾಕ್ಷಿ ಕೆ.ಎಲ್.**

ವೇದಾಂತದ ಆಧಾರ ಸ್ತಂಭಗಳೇ ಪ್ರಸ್ಥಾನತ್ರಯಗಳು ಎನ್ನುತ್ತಾರೆ. ಇವುಗಳಲ್ಲಿ ಅತ್ಯಂತ ಜನಪ್ರಿಯವಾಗಿರುವ ಭಗವದ್ಗೀತೆಯು ಎಲ್ಲ ದೃಷ್ಟಿಗಳಿಂದಲೂ ಲೋಕೋತ್ತರವಾದ ಕೃತಿಯಾಗಿದೆ. ಈ ಕುರಿತು ಇಲ್ಲಿ ಚಿಂತಿಸಿರುವ ಲೇಖಕಿ, ಮೈಸೂರು ಮಹಾರಾಣಿ ಕಾಲೇಜಿನ ನಿವೃತ್ತ ಪ್ರಾಂಶುಪಾಲರು. ಸಂಸ್ಕೃತ ಭಾಷೆ ಹಾಗೂ ಸಾಹಿತ್ಯ, ವೇದಾಂತ ಹಾಗೂ ಇನ್ನಿತರ ಆಧ್ಯಾತ್ಮಿಕ ಕೃತಿಗಳನ್ನು ವಿಶೇಷವಾಗಿ ಅಧ್ಯಯನ ಮಾಡಿರುವ ಅವರು ಮೈಸೂರು ಆಶ್ರಮದ ಭಕ್ತರು. ದೀರ್ಘಕಾಲದಿಂದ ಅವರು 'ವಿವೇಕಪ್ರಭ' ಪತ್ರಿಕೆಯಲ್ಲಿ ಹಲವು ಲೇಖನಗಳನ್ನು ಬರೆಯುತ್ತ ಬಂದಿದ್ದಾರೆ.

ಮನೆಯಿಂದ ಹೊರಟು ಮಂದೆ ಸೇರಿದ ಹಸು, ಆಡು ಮೊದಲಾದವು ಕಾಡು, ಬಯಲುಗಳಲ್ಲಿ ಅಲೆದು ಮೇದು ಸಂಜೆಗೆ ಹಿಂದಿರುಗುತ್ತವೆ. ಅವು ಅಕ್ಕಪಕ್ಕದ ಅಥವಾ ಬೇರೆ ಯಾರದೋ ಯಾವುದೋ ಮನೆಗೆ ಹೋಗುವುದಿಲ್ಲ, ತಮ್ಮದೇ ಮನೆಗೆ ಹೋಗುತ್ತವೆ. ಅದು ಹೇಗೆ? ಇದು ಪ್ರಕೃತಿಯ ಸಹಜ ಗುಣ, ಅಥವಾ ಸೃಷ್ಟಿಯಲ್ಲಿನ ಸಹಜ ವ್ಯವಸ್ಥೆ ಎಂದು ಹೇಳಬಹುದು.ಸೃಷ್ಟಿಯಲ್ಲಿ ಪ್ರತಿಯೊಂದು ಪದಾರ್ಥವೂ ತಮ್ಮ ತಮ್ಮ ಮೂಲದ ಕಡೆಗೇ ಸಾಗುವ ಪ್ರವೃತ್ತಿ ಹೊಂದಿರುತ್ತವೆ. ಉದಾಹರಣೆಗೆ: ಸಮುದ್ರದಿಂದ ಸೂರ್ಯನ ತಾಪದಿಂದ ಆಕಾಶ ಸೇರಿದ್ದ ನೀರಿನ ಬಿಂದು ಮಳೆಯ ರೂಪದಲ್ಲಿ ಭೂಮಿ ಮುಟ್ಟುತ್ತದೆ. ಒಂದು ಬಿಂದು ಒಂದರೊಡನೆ ಸೇರಿ ಸಾಗುತ್ತಾ ಸಮುದ್ರವನ್ನು ಮುಟ್ಟಿ ತಮ್ಮ ಸಾಗುವಿಕೆಗೆ ಮಂಗಳ ಹಾಡುತ್ತವೆ. ಭೂಮಿಯಿಂದ ಮೇಲಕ್ಕೆಸೆದ ಚೆಂಡು, ಕಲ್ಲು, ತಟ್ಟೆ... ಇತ್ಯಾದಿ ಭೂಮಿ ಸೇರಲು ತವಕಿಸುತ್ತವೆ. ಯಾವ ವೇಗದಲ್ಲಿ ಮೇಲಕ್ಕೆ ಸೇರಿದ್ದವೋ ಅದೇ ವೇಗದಲ್ಲಿ ಭೂಮಿ ಸೇರಿ ಸಮಾಧಾನಗೊಳ್ಳುತ್ತವೆ.

## ಪ್ರಸ್ಥಾನ

ಹೀಗೆ ತಮ್ಮ ತಮ್ಮ ನೆಲೆ ಸೇರುವುದು, ಅದಕ್ಕಾಗಿ ತುಡಿಯುವುದು, ಎಲ್ಲ ಭೌತವಸ್ತುಗಳಲ್ಲಿರುವಂತೆ ಮಾನವನಲ್ಲೂ ಸಹಜವಾಗಿರುವ ಭಾವ ಅಥವಾ ಧರ್ಮ. ಮೇಲಿನಿಂದ ಬಿದ್ದ ನೀರಿನ ಬಿಂದು ಬತ್ತಿ ಹೋಗಿ, ಬೇರೆಯದರ ಜೊತೆ ಬೆರೆತು ಸ್ವಲ್ಪ ದೂರ ಸಾಗಿ, ನಷ್ಟವಾಗಿ ಮತ್ತೆ ಬಿಂದುವಾಗಿ ಬಿದ್ದು ಹೀಗೆ ಏನೇನೋ ಕಸರತ್ತು ಮಾಡುತ್ತಾ ಕೊನೆಗೆ ಬಹಳ ಪ್ರಯಾಸದಿಂದ ಸಮುದ್ರ ಸೇರುತ್ತದೆ. ಅದೇ ರೀತಿ ಮಾನವ ಅಲ್ಲಲ್ಲಿನ ವಿವಿಧ ಆಕರ್ಷಣೆಗೆ ಕಾಮಕ್ರೋಧಾದಿಗಳಿಗೆ ವಶನಾಗಿ ತನ್ನತನವನ್ನೂ ಸಾಧನೆಯನ್ನೂ ಅದರ ಫಲವನ್ನೂ ಕಳೆದುಕೊಳ್ಳುತ್ತಾ ಮತ್ತೆ ಮತ್ತೆ ಸಾಧನೆ ಮಾಡುತ್ತಾ ಮೇಲು ಮೇಲಿನ ಸ್ತರಕ್ಕೆ ಸಾಗಬೇಕಾಗುತ್ತದೆ. ಹಾಗೆ ಅವನು ತನ್ನ ಮೂಲದ ಕಡೆಗೆ ಸಾಗುವ ಆ ಕ್ರಮ 'ಪ್ರಸ್ಥಾನ' ಎನ್ನಿಸಿಕೊಳ್ಳುತ್ತದೆ. ಪಾಂಡವರು ಭೂಮಿಯ ಮೇಲಿನ ತಮ್ಮ ಜೀವನವನ್ನು ಅಂತ್ಯಗೊಳಿಸಿ ತಮ್ಮ ನೆಲೆಯೆಡೆಗೆ ಹೊರಟ ಪರ್ವವನ್ನು ಮಹಾಭಾರತದಲ್ಲಿ **'ಮಹಾಪ್ರಸ್ಥಾನ ಪರ್ವ'** ಎಂದು ಹೆಸರಿಸಿರುವುದನ್ನು ಗಮನಿಸಬಹುದು.

ನೋಡಲ್ಪಡುವ ವಸ್ತು ನೋಡುವ ಸಾಧನ ಎರಡೂ ದರ್ಶನ ಎನ್ನಿಸಿಕೊಳ್ಳುತ್ತದೆ.(**ದೃಶ್ಯತೇ ಇತಿ ದರ್ಶನಂ, ದೃಶ್ಯತೇ ಅನೇನ**



**ಇತಿ ದರ್ಶನಂ**) ಹಾಗೆಯೇ ಗುರಿಯೂ ಅದನ್ನು ಮುಟ್ಟಲಿಕ್ಕಾಗಿ ಕ್ರಮಿಸುವ ಸಾಧನ ದಾರಿಯೂ 'ಮಾರ್ಗ'ಎನ್ನಿಸಿಕೊಳ್ಳುತ್ತವೆ. **(ಮೃಗ್ಯತೇ ಇತಿ ಮಾರ್ಗಃ ಮೃಗ್ಯತೇ ಅನೇನ ಇತಿ ಮಾರ್ಗಃ)** ಅಂತೆಯೇ 'ಪ್ರಸ್ಥಾನ'ವೂ ಪ್ರಕೃಷ್ಟವಾದ ಶ್ರೇಷ್ಠವಾದ ಸ್ಥಾನ, ನೆಲೆ ಮತ್ತು ಅದನ್ನು ಸೇರಲು ಇರುವ ಸಾಧನೆ ಆಚಾರವಿಚಾರ ವ್ಯವಹಾರಾದಿಗಳೂ ಕೂಡ 'ಪ್ರಸ್ಥಾನ' ಎನ್ನಿಸಿಕೊಳ್ಳುತ್ತವೆ.

## ಪ್ರಸ್ಥಾನತ್ರಯ

ಜೀವಿ ತನ್ನ ನೆಲೆಯನ್ನು ಸೇರಿದಾಗಲೇ ಜೀವಿಯ ಜೀವನ ಯಾತ್ರೆ ಕೊನೆಗೊಳ್ಳುವುದು. ಅಲ್ಲಿಯವರೆಗೆ **ಪುನರಪಿ ಜನನಂ ಪುನರಪಿ ಮರಣಂ** ಎನ್ನುವಂತೆ ಹುಟ್ಟುತ್ತಾ ಸಾಯುತ್ತಾ ಬೇರೆ ಬೇರೆ ಶರೀರ ತಳೆಯುತ್ತಾ ಸಾಗುತ್ತಿರುತ್ತದೆ. ಜೀವಿಯ ಜೀವನದ ಈ ಸಾರ್ಥಕತೆಗಾಗಿ ಅನುಭವಿಗಳು, ಜ್ಞಾನಿಗಳು, ಯೋಗಿಗಳು, ಋಷಿಗಳು ಶ್ರೇಷ್ಠವಾದ ಮಾರ್ಗವನ್ನು ತೋರಿಸಿಕೊಟ್ಟಿದ್ದಾರೆ. ತಾವು ಆ ದಾರಿಯಲ್ಲಿ ಸಾಗಿ ಆ ದಾರಿಯ ಸೌಲಭ್ಯ ಸೌಕರ್ಯಗಳನ್ನು ಅನುಭವಿಸಿದ್ದಾರೆ. ಈ 'ಪ್ರಸ್ಥಾನ'ದ ಸ್ವರೂಪವನ್ನೂ 'ಪ್ರಸ್ಥಾನ' ಹೊಂದಲು ಇರುವ ವಿವಿಧ ಮಾರ್ಗಗಳನ್ನೂ ದಾರ್ಶನಿಕರು ಕ್ರೋಡೀಕರಿಸಿ ಅವುಗಳನ್ನು 'ಪ್ರಸ್ಥಾನತ್ರಯ' ಎಂದು ಹೆಸರಿಸಿದ್ದಾರೆ.

ವೇದ, ಬ್ರಹ್ಮಸೂತ್ರ, ಭಗವದ್ಗೀತೆ ಇವೇ ಈ ಪ್ರಸ್ಥಾನ ತ್ರಯಗಳು. ಇವುಗಳಲ್ಲಿ ಆಯಾಯಾ ಜೀವಿಗಳ ಸಂಸ್ಕಾರ, ಶಕ್ತಿ, ಜ್ಞಾನ, ಸಾಮರ್ಥ್ಯಾದಿಗಳನ್ನು ಅವಲಂಬಿಸಿ ವಿವಿಧ ವಿಚಾರಗಳನ್ನೂ, ತತ್ತ್ವಗಳನ್ನೂ ಕ್ರಮಗಳನ್ನೂ ಸಾಧನಾಮಾರ್ಗಗಳನ್ನೂ

ಬೋಧಿಸಲಾಗಿದೆ. ವೇದ ಪ್ರತಿಪಾದಿಸುವ ವಿಚಾರಗಳನ್ನೂ ತತ್ತ್ವಗಳನ್ನೂ ರಹಸ್ಯಗಳನ್ನೂ ಸುಲಭವಾಗಿ ಅರ್ಥಮಾಡಿಕೊಳ್ಳಲು ಆಗುವುದಿಲ್ಲ. ಜೊತೆಗೆ ವೈದಿಕ ಭಾಷೆಯೂ ಸ್ವಲ್ಪ ಜಟಿಲವಾಗಿಯೇ ಇದೆ. ಆಪ್ತವಾಗಿಲ್ಲ. ಭಾಷ್ಯಗಳು, ಗುರುಮುಖ ಅಧ್ಯಯನ ಉಪದೇಶ ಇತ್ಯಾದಿಗಳ ಸಹಾಯವಿದ್ದರೂ ಅವುಗಳ ಮರ್ಮವರಿತು ಅವನ್ನು ಜೀವನಕ್ಕೆ ಅಳವಡಿಸಿಕೊಂಡು ಅನುಭವ ಕ್ಷೇತ್ರಕ್ಕೆ ತಂದುಕೊಳ್ಳುವುದು ಸ್ವಲ್ಪ ದುಸ್ಸಾಧ್ಯ ಎನ್ನಿಸುತ್ತದೆ. ಇದನ್ನು 'ಶ್ರುತಿಪ್ರಸ್ಥಾನ' ಎನ್ನುತ್ತಾರೆ. 'ನ್ಯಾಯಪ್ರಸ್ಥಾನ' ಎನ್ನಿಸಿಕೊಂಡ ಬ್ರಹ್ಮಸೂತ್ರವು ಹೆಸರೇ ಹೇಳುವಂತೆ ಅಗಾಧವೂ ಗಂಭೀರವೂ ಗಹನವೂ ಆದ ವೇದ ಮತ್ತು ಉಪನಿಷತ್ತುಗಳು ಪ್ರತಿಪಾದಿಸುವ ತಾತ್ತ್ವಿಕ ವಿಚಾರಗಳನ್ನು ಅತ್ಯಂತ ಚಿಕ್ಕ ಚಿಕ್ಕ ವಾಕ್ಯ




ಗಳಲ್ಲಿ ಸಂಗ್ರಹಿಸಿ ಹೇಳುತ್ತವೆ. ಹಾಗಾಗಿ ಆ ಸೂತ್ರಗಳು ಪ್ರತಿಪಾದಿಸುವ ವೇದಾಂತ ತತ್ತ್ವಗಳ ಅರ್ಥಗ್ರಹಣೆಗೆ ಭಾಷ್ಯಗಳ ಸಹಾಯ ಬೇಕೇಬೇಕು. ಭಾಷ್ಯಕಾರರೂ ತಮ್ಮ ತಮ್ಮ ಸಿದ್ಧಾಂತಗಳಿಗೆ ತಕ್ಕಂತೆ ಒಬ್ಬೊಬ್ಬರು ಒಂದೊಂದು ವಿಧವಾಗಿ ಸೂತ್ರಗಳಿಗೆ ಅರ್ಥವಿವರಣೆ ನೀಡುತ್ತಾರೆ. ಇದರಿಂದ ವೈದಿಕ ಸಾಹಿತ್ಯಕ್ಕಿಂತ ಈ ಸೂತ್ರಗಳನ್ನು ಅದರ ಭಾಷ್ಯಗಳನ್ನು ಅರ್ಥೈಸಿಕೊಳ್ಳುವುದು ಕಠಿಣ ಎಂದು ಭಾಸವಾಗಿಬಿಡುತ್ತದೆ. ಇದು ದೋಷವೆಂದಲ್ಲ. ಸಾಧಾರಣ ಮಾನವನಿಗೆ ಅವುಗಳನ್ನು ವಿಶ್ಲೇಷಿಸಿಕೊಂಡು ತನಗೆ ಬೇಕಾದುದೇನು? ತಾನು ಏನನ್ನು ಆಯ್ದುಕೊಂಡು ಯಾವ ರೀತಿ ಸಾಗಬೇಕು? ಎಂದು ನಿರ್ಣಯಿಸಿಕೊಳ್ಳಲು ವಿವೇಕ ಸಾಲದಾಗುತ್ತದೆ.

ಹಾಗಾಗಿ ಸರಳವಾದ ಭಾಷೆಯಲ್ಲಿ ನೇರನುಡಿಗಳ ಮೂಲಕ ತತ್ತ್ವವನ್ನು ವಿಚಾರಗಳನ್ನೂ ತಿಳಿಸುವ 'ಸ್ಮೃತಿಪ್ರಸ್ಥಾನ' ಎನ್ನಿಸಿಕೊಂಡ ಮೂರನೆಯ ಪ್ರಸ್ಥಾನವಾದ 'ಭಗವದ್ಗೀತೆ' ಸಾಮಾನ್ಯನಿಗೆ ತೀರಾ ಹತ್ತಿರವಾಗುತ್ತದೆ. ಆಪ್ಯಾಯಮಾನವಾದುದಾಗುತ್ತದೆ. ಆಪ್ತಮಿತ್ರನಂತೆ ಸಲಹಾಗಾರನಂತೆ ಪಕ್ಕ ಕುಳಿತು ಭುಜದ ಮೇಲೆ ಕೈಯಿರಿಸಿ ಬೆನ್ನುಸವರಿ, ಸಮಸ್ಯೆಗಳ ಕ್ಲೇಶಗಳ ಭಾವಬಂಧಗಳ ಬಿಗಿ ಹಿಡಿತಗಳ ಮರ್ಮವನ್ನರಿತು ಹೃದಯ ಮುಟ್ಟುವಂತೆ ಮಾನವನಿಗೆ ಅದು ತಿಳಿ ಹೇಳುತ್ತದೆ. ಕೈಹಿಡಿದು ಎಬ್ಬಿಸಿ ನಡೆಸುತ್ತದೆ. ಈ ಹಿನ್ನೆಲೆಯಲ್ಲಿ 'ಪ್ರಸ್ಥಾನ'ದ ಭಾವ ಹೊಂದಿರುವವನ ಜೀವನದಲ್ಲಿ ಗೀತೆ ವಿಶೇಷ ಸ್ಥಾನ ಪಡೆದುಕೊಳ್ಳುತ್ತದೆ. ಹಾಗಲ್ಲದೆಯೂ ಮಾನವನ ಭೌತಿಕವಾದ ಜೀವನಯಾತ್ರೆ ಸುಗಮವಾಗಿ, ಸಂತೋಷಕರವಾಗಿ, ಹಿತಕರವಾಗಿ ಸಾಗಲೂ ಗೀತೆಯ ಅವಲಂಬನೆ ಉಪಕಾರಿಯೇ ಆಗಿದೆ.

## ಶಾಸ್ತ್ರವಾಗಿ ಪ್ರಸ್ಥಾನತ್ರಯ

'ಪ್ರಸ್ಥಾನತ್ರಯ' ಗಳು ಶಾಸ್ತ್ರವೂ ಹೌದು. ಏಕೆಂದರೆ ಇವು ಮಾನವನನ್ನು ತಿದ್ದಿ ತೀಡಿ ಸಮಯದಲ್ಲಿ ಜ್ಞಾಪಿಸಿ ಶಿಕ್ಷಿಸಿ ಸುಂದರ ಶಿಲ್ಪವನ್ನಾಗಿಸುತ್ತದೆ. ಮತ್ತು ಮೇಲೆ ಹೇಳಿದಂತೆ ಅವನ ಜೀವನದ ಸಾರ್ಥಕತೆಯನ್ನು ಹೊಂದಲು ಸಹಾಯ ಮಾಡುತ್ತವೆ. ಹಾಗೂ ಆ ನಿಟ್ಟಿನಲ್ಲಿ ಸಾಗಲು ಉಪಕರಿಸುವ ದಾರಿದೀಪಗಳೂ ಮಾರ್ಗದರ್ಶಕಗಳೂ ಆಗಿವೆ. ಮಾನವನು ಸದಾಚಾರನಿಷ್ಠನಾಗಿರುವಂತೆ ಮಾಡಲು ಅನೇಕ ಆಖ್ಯಾನ ಉಪಾಖ್ಯಾನಗಳನ್ನೂ ಆದರ್ಶ ಜೀವನವನ್ನು ನಡೆಸಿದ ವ್ಯಕ್ತಿಗಳನ್ನು ಉದಾಹರಿಸುತ್ತದೆ. ಸನ್ನಡತೆ ಸದ್ಯುಕ್ತಿ ಸದ್ಭಾವಗಳಿಂದ ದೊರಕುವ ಉತ್ತಮೋತ್ತಮ ಪ್ರಯೋಜನಗಳನ್ನು ಮುಂದಿಟ್ಟು ಮಾನವನನ್ನು ಸನ್ನಿಷ್ಠನಾಗಿರುವಂತೆ ಆದೇಶಿಸುತ್ತವೆ. ಆ ಮೂಲಕ ತನ್ನ ಆಂತರ್ಯದ ಪ್ರಕರ್ಷ ಜ್ಯೋತಿಯನ್ನು ಕಾಣುವ, ಅಮೃತತ್ವ ಪಡೆಯುವ, ತೀವ್ರ ಹಂಬಲವನ್ನು ಉದ್ದೀಪನಗೊಳಿಸುತ್ತವೆ. ನಮ್ಮ ಮೂಲ ನೆಲೆಯ ದಿವ್ಯತೆಯನ್ನು ಭವ್ಯತೆಯನ್ನೂ ಪಾರಮ್ಯವನ್ನೂ ಮನವರಿಕೆ ಮಾಡಿಕೊಡುತ್ತವೆ. ನಮ್ಮ ಸ್ವಸ್ವರೂಪದಿಂದ ಜಾರದಂತೆ, ದಾರಿ ದೂರ ದೂರ ಬಹುದೂರ ಬಂದು ಬಿಟ್ಟಿರುವ ನೆಲೆಯಿಂದ ಪ್ರಕರ್ಷಮಾನವಾದ ತೇಜೋಮಯವಾದ ದಿವ್ಯಮಾರ್ಗಕ್ಕೆ ಎಳೆದು ತಂದು ನಿಲ್ಲಿಸುತ್ತದೆ. ('ಸ್ವಸ್ವರೂಪ ಸ್ಥಿತಾವಸ್ಥಾನಾತ್ಮಕ ತ್ರಾಣಂ ಶಾಸ್ತ್ರಂ') ಎಲ್ಲವನ್ನೂ ಎಲ್ಲರನ್ನೂ ಪ್ರೀತಿಸುವ, ಆದರಿಸುವ, ಗೌರವಿಸುವ ದಿವ್ಯಾಮೃತ ಜ್ಯೋತಿಸ್ವರೂಪದಿಂದ ಕಾಣುವ ಭಾವಸೌಹಾರ್ದವನ್ನು ಹೊಂದುವಲ್ಲಿಯವರೆಗೆ ನಮ್ಮ ಕೈಬಿಡದೆ ತಿದ್ದುತ್ತಲೇ ಇರುತ್ತವೆ. ನಮ್ಮ ಇಂದ್ರಿಯ ಮನಸ್ಸು ಬುದ್ಧಿಗಳನ್ನು ಸರಿಯಾದ ಶಿಸ್ತಿಗೆ ಒಳಪಡಿಸುತ್ತವೆ.

ಕ್ರಿ.ಶ.೮-೯ನೇ ಶತಮಾನದಲ್ಲಿ ರಬಿಯಾ ಎಂಬ ಒಬ್ಬ ಸೂಫಿ ಸಂತಳು ಇದ್ದಳು. ಅವಳನ್ನು "ನೀನು ದೇವರನ್ನು ಪ್ರೀತಿಸುವೆಯಾ?" ಎಂದು ಕೇಳಿದರೆ "ಹೌದು" ಎನ್ನುತ್ತಿದ್ದಳು. "ಸೈತಾನನನ್ನು ದ್ವೇಷಿಸುವೆಯಾ?" ಎಂದರೆ "ಸೈತಾನನನ್ನು ದ್ವೇಷಿಸಲು ನನಗೆ ದೈವ-ಪ್ರೀತಿಯು ಸಮಯವನ್ನೇ ಕೊಡುವುದಿಲ್ಲ" ಎನ್ನುತ್ತಿದ್ದಳು.

ಇಂತಹ ಶಿಸ್ತು ನಮಗೆ ಈ ಪ್ರಸ್ಥಾನತ್ರಯಗಳಿಂದ ಲಭಿಸುತ್ತದೆ. ಆದುದರಿಂದ ಇವು ಶಾಸ್ತ್ರ. ಇವು ವ್ಯಕ್ತಿ ತನ್ನ ಮೂಲ ನೆಲೆಯನ್ನರಿತು ಅದನ್ನು ಹೊಂದಿ ಸಚ್ಚಿದಾನಂದಮಯನಾಗಿ ಬದುಕಬೇಕೆಂದು ಆಶಿಸುತ್ತವೆ. (ಶಾಸ್=ಆಶಿಸು, ಬಯಸು). ಅದನ್ನು ಹೊಂದಲು ಬೇಕಾದ ವಿಧಿನಿಷೇಧಗಳನ್ನು ನಮ್ಮ

ಮುಂದಿಟ್ಟು ಅವುಗಳನ್ನನುಸರಿಸುವುದರಿಂದ ಪಡೆಯುವ ಲಾಭ -ನಷ್ಟ, ನೋವು-ನಲಿವುಗಳನ್ನು ತೋರಿ ವಿಧಿ ಮಾರ್ಗವನ್ನೇ ಅನುಸರಿಸಬೇಕೆಂದು ಶಾಸನ ಮಾಡುತ್ತವೆ. ಹಾಗೆ ಮಾಡದೆ ನಿಷಿದ್ಧಕರ್ಮ ಅನುಸರಿಸಿದಲ್ಲಿ ಶಾಸನ(ಶಿಕ್ಷೆ) ಮಾಡುತ್ತವೆ.

ಹೀಗೆ ಒಟ್ಟಿನಲ್ಲಿ ಇವು ಜೀವಿಯು ತನ್ನ ಮೂಲ ನೆಲೆ ಸೇರಿ ಸುಕ್ಷೇಮದಿಂದ ಸುಭದ್ರನಾಗುವಂತೆ ರಕ್ಷಿಸುತ್ತವೆ. ವ್ಯಕ್ತಿ ಸಮಾಜ ದೇಶಗಳ ಸುರಕ್ಷತೆ ಸುಕ್ಷೇಮ ಸಾಧಕವಾಗುತ್ತವೆ.

### ಪ್ರಸ್ಥಾನತ್ರಯದಲ್ಲಿ ಗೀತೆ

ಪ್ರಸ್ಥಾನತ್ರಯದಲ್ಲಿ ಒಂದಾದ ಗೀತೆಯೂ ಇದೇ ಕೆಲಸ ವನ್ನು ಮಾಡುತ್ತದೆ. ಕಂಗೆಟ್ಟು ದಾರಿಗಾಣದೆ ಕೈಚೆಲ್ಲಿ ಕುಸಿದು ಕುಳಿತ ಜೀವಿಯನ್ನು(**ಕ್ಲೈಬ್ಯಂ ಮಾ ಸ್ಮ ಗಮಃ**) ಅಂಜಬೇಡ ಬೆಚ್ಚಬೇಡ ಹೆದರಬೇಡ; ನೀನು ಕುರಿಯಲ್ಲ ಸಿಂಹ; ನಿನ್ನ ಅಂತಃ ಸತ್ವ ಅಗಾಧವಾದುದು, ನೀನು ಅನುಪಮ ಶಕ್ತಿ ಉಳ್ಳವನು; ಹೀಗೆ ಕುಸಿಯುವುದು ನಿನಗೆ ತರವಲ್ಲ ; ಮೇಲೇಳು ಎಂದು ಬಡಿದೆಬ್ಬಿಸಿ ಸರಿಯಾದ ಮಾರ್ಗದಲ್ಲಿ ಆಪ್ತಭಾವದಿಂದ, ಆತ್ಮೀಯ ಭಾವದಿಂದ ನಡೆಸುತ್ತದೆ. ಇದು ಅದರ ವೈಶಿಷ್ಟ್ಯ; ಜೀವನದಲ್ಲಿ ಮಾನವನು ಹೊಂದಿರಬೇಕಾದ ಮನೋಭಾವ, ಸದಾಚಾರ ಗಳನ್ನು ತಿಳಿಸಿ ಅವನ ನಡೆಯನ್ನು ತಿದ್ದುತ್ತದೆ.

### ನಾಗರಿಕತೆಯ ಪಿಡುಗು

ವಿಜ್ಞಾನದ ಮುನ್ನಡೆಯಿಂದ ವೈಜ್ಞಾನಿಕ ಸುಖೋಪಕರಣ ಗಳ ಹೊಸ ಹೊಸ ಆವಿಷ್ಕಾರಗಳು ಸಮೃದ್ಧವಾಗಿ ಆಗುತ್ತಿವೆ. ಇದರಿಂದ ವಿಶ್ವದಾದ್ಯಂತ ಗ್ರಾಮಗ್ರಾಮಗಳಲ್ಲಿ ನಾಗರಿಕತೆ ಹೆಜ್ಜೆ ಇರಿಸಿದೆ. ಈ ನಾಗರಿಕತೆಯ ದೊಡ್ಡ ಪಿಡುಗು 'ನಾನು' 'ನಾನೇ'. ಏನಿದೆ ಎಲ್ಲಾ ಮೊದಲು ನನಗೇ. ಎಲ್ಲಿ ಅದು ನನಗೆ ಸಿಗುವು ದಿಲ್ಲವೋ ತಪ್ಪಿಹೋಗುವುದೋ ಖಾಲಿಯಾಗಿ ಬಿಡುವುದೋ ಎಂಬ ತವಕ. ಅದರಿಂದ ಆತುರ, ಸ್ಪರ್ಧೆ, ತೀವ್ರ ಪೈಪೋಟಿ ಪ್ರತಿ ಯೊಂದರಲ್ಲೂ. ಸುರಕ್ಷಿತತೆ-ಮೊದಲು ನನಗೆ, ಆರೋಗ್ಯ-ಮೊದಲು ನನಗೆ, ಆವಶ್ಯಕ ಸಾಮಗ್ರಿ-ಮೊದಲು ನನಗೆ, ವಿದ್ಯಾಭ್ಯಾಸ-ಮೊದಲು ನನಗೆ, ಉದ್ಯೋಗ-ಮೊದಲು ನನಗೆ... ಈ ಸ್ಪರ್ಧೆಯ ಕಾರಣ ಎಲ್ಲೆಲ್ಲೂ ಆತಂಕ-ಕಳವಳ ಮಾನಸಿಕ ಖಿನ್ನತೆ ಉದ್ವೇಗ ತುಂಬಿಕೊಂಡಿದೆ. ಈ ಕಾರಣದಿಂದಲೇ ನ್ಯಾಯ, ನೀತಿ, ಧರ್ಮ, ಸತ್ಯ... ಇತ್ಯಾದಿ ಎಲ್ಲದರಲ್ಲೂ ಎಲ್ಲಾ ಹಂತ ದಲ್ಲೂ ಭ್ರಷ್ಟತೆ, ಜಾರುವಿಕೆ ಮೆರೆಯುತ್ತಿದೆ.

ಇವೆಲ್ಲವೂ 'ಕಾಮ'ದ ವಿವಿಧ ಮುಖವಾಡಗಳು, ಲೀಲೆ ಗಳು. ಈ ಬಯಕೆಗಳಲ್ಲಿ ಯಾವುದೊಂದು ಸಿಕ್ಕುವುದು ಸಂಶಯಾಸ್ಪದ ಎಂದೆನ್ನಿಸಿದರೆ ಅಲ್ಲಿ 'ಕ್ರೋಧ' ದ್ವೇಷ. ವ್ಯಕ್ತಿ ಸಂಬಂಧ, ಯಾರಾದರೂ ಆಗಿರಲಿ, ಏನಾದರೂ ಆಗಿರಲಿ, ಆ ಅಡಚಣೆಯನ್ನು ನಿವಾರಿಸಿಕೊಳ್ಳುವುದಕ್ಕೆ ಮನಸ್ಸು ತವಕಪಡು ತ್ತದೆ. ಅದರಿಂದ ವ್ಯಕ್ತಿ ಬಯಸಿದ್ದು ದೊರಕುವುದೇನು? ತನ್ನ ಮನದಾಸೆ ನೆರವೇರುವುದೇನು? ನೆನೆದ ಕಾರ್ಯ ಸಿದ್ಧಿಸುವು ದೇನು? ಇತ್ಯಾದಿ ಎಲ್ಲಾ ವಿವೇಕ ಪೂರ್ಣವಾಗಿ ಅಳಿಸಿ ಹೋಗಿ ಬಿಟ್ಟಿರುತ್ತದೆ. ಈ ಕಾಮಕ್ರೋಧಗಳ ವೇಗಕ್ಕೆ ವಶರಾದ ಕಾರಣ ವಿದ್ಯಾವಂತ-ಅವಿದ್ಯಾವಂತ, ಬಡವ-ಧನಿಕ, ಕುಲವಂತ-ಕುಲ ಹೀನ, ಈ ಯಾವುದೂ ನೆನಪಿಗೆ ಬರುವುದಿಲ್ಲ. ತನಗೆ ತನ್ನಂತ ಹವನಿಗೆ ಈ ನಡೆ ಉಚಿತವೇ ಯೋಗ್ಯವೇ ಎಂಬ ವಿವೇಕ ಇರು ವುದಿಲ್ಲ.

ಬೇರೆಯವರಿಗೆ ದೊರೆತು ನಮಗೆ ಸಿಕ್ಕದೆ ಹೋದರಂತೂ, ಅವನ ಮನದ ಹುಚ್ಚು ಕುಣಿತ ಮಾತಿಗೆ ನಿಲುಕದ್ದು. ಈ ಹಿನ್ನೆಲೆ ಯಲ್ಲಿ ತಾನು ಬಯಸಿದ್ದು ತನ್ನದು ತನಗೆ ದೊರಕದೆ ಹೋದರೆ ಎಂದು ಒಂದು ವಿಧ ಭಯವಾದರೆ, ತಾನು ಕಷ್ಟದಿಂದ ಗಳಿಸಿ ಸಂಗ್ರಹಿಸಿದ್ದು ಪರರ ಸ್ವತ್ತಾಗಿ ಹೋಗುವುದೆಂಬ ಮತ್ತೊಂದು ವಿಧ ಭಯ. **ಈ 'ಪರರು' ಎನ್ನುವುದರಡಿ ತನ್ನದೇ ಆಪ್ತ ತಂದೆ ತಾಯಿ ಮಕ್ಕಳು ಹೆಂಡತಿ ಎಲ್ಲಾ ಸೇರುತ್ತಾರೆ.** ತಾನು ವಂಚಿತನಾಗ ಬಹುದು ತಾನು ಗಳಿಸಿದ್ದು ಕಳ್ಳರ ಪಾಲಾಗಬಹುದು... ಇತ್ಯಾದಿ ವಿಚಾರಗಳು ವ್ಯಕ್ತಿಯ ಶಾಂತಿಗೆ ಭಂಗ ತರುತ್ತವೆ. ಆರೋಗ್ಯ ವನ್ನು ನಾಶಮಾಡುತ್ತವೆ. ಅಷ್ಟೇ ಅಲ್ಲದೆ ಇವು ವ್ಯಕ್ತಿಯ ನೈಜ ಸ್ವಭಾವವನ್ನೇ ಮರೆಮಾಡಿಬಿಡುತ್ತವೆ. ಆದುದರಿಂದ ಇವುಗಳಿಗೆ ಕಡಿವಾಣ ಹಾಕಲೇಬೇಕು. ಅವುಗಳ ಜಾಗದಲ್ಲಿ ಒಳ್ಳೆಯ ವಿಚಾರ ಭಗವಚ್ಚಿಂತನೆಗಳನ್ನು ತುಂಬಬೇಕು. ಹಾಗಾದಾಗ ಈ ಪಿಡುಗಿ ನಿಂದ ಜೀವಿ ಮುಕ್ತನಾಗಿ ಸುಖ-ಶಾಂತ-ಸಮೃದ್ಧ-ತೃಪ್ತ ಬದುಕು ನಡೆಸಲು ಸಾಧ್ಯವಾಗುತ್ತದೆ. ಇದಕ್ಕೆ ಗೀತೆ ಅನೇಕ ರೀತಿಯಲ್ಲಿ ಸಹಾಯ ಮಾಡುತ್ತದೆ.

### ಜೀವನ ಶಾಸಕವಾಗಿ ಗೀತೆ

ಈ ಕಾಮ, ಕ್ರೋಧ, ಲೋಭ (ಮಹತ್ವಾಕಾಂಕ್ಷೆ)ಗಳು ನರಕದ ಬಾಗಿಲುಗಳು; ಇವು ನಮ್ಮ ಬದುಕನ್ನು ದುಃಖಮಯ ವಾಗಿಸುತ್ತವೆ; ತಾಳಲಾರದ ಬಾಧೆಯಿಂದ ಆಕ್ರಂದನ ಮಾಡು ವಂತೆ ಮಾಡುತ್ತವೆ. (ನರಂ ಆಕ್ರಂದಯತಿ ಇತಿ ನರಕಃ). ಆದುದ ರಿಂದ, **ತಸ್ಮಾದೇತತ್ತ್ರಯಂ ತ್ಯಜೇತ್**, ಈ ಮೂರನ್ನೂ ತ್ಯಜಿಸಲೇ ಬೇಕು ಎಂದು ಗೀತೆಯು ಆಜ್ಞಾಪಿಸುತ್ತದೆ.

'ಕಾಮ' ತಪ್ಪು ಎನ್ನುವುದಾದರೆ ಬದುಕಲು ಒಂದು ದಾರಿ ಇರಬೇಡವೆ? ಅದೂ ಒಂದು ಬಯಕೆ ತಾನೆ! ಅದಿಲ್ಲದಿದ್ದರೆ ಕ್ರಿಯೆಯಲ್ಲಿ ತೊಡಗಲೂ ಉತ್ಸಾಹವಾದರೂ ಎಲ್ಲಿಂದ ಬಂದೀತು? ಆಗ ಆ ಜೀವನ ಅರ್ಥಶೂನ್ಯವಾಗುವುದಿಲ್ಲವೆ? ಎಂಬ ಪ್ರಶ್ನೆ ಮೂಡುವುದು ಸಹಜ. ಅದಕ್ಕೆ ಗೀತೆ, 'ಕಾಮ' ಎಂಬುದು ನಿಷಿದ್ಧವಲ್ಲಪ್ಪ ಅದನ್ನು ಧರ್ಮಕ್ಕೆ ಬದ್ಧಪಡಿಸು ಎಂದು ಹೇಳು ತ್ತದೆ. ಧರ್ಮ ಅಂಗೀಕರಿಸುವ ಕಾಮವನ್ನು ಹೊಂದುವುದು, ಅದಕ್ಕಾಗಿ ಯತ್ನಶೀಲರಾಗುವುದು ಯಾವ ರೀತಿಯೂ ತಪ್ಪಾಗ ಲಾರದು.

**ಯಃ ಶಾಸ್ತ್ರವಿಧಿಮುತ್ಸೃಜ್ಯ ವರ್ತತೇ ಕಾಮಕಾರತಃ ।**
**ನ ಸ ಸಿದ್ಧಿಮವಾಪ್ನೋತಿ ನ ಸುಖಂ ನ ಪರಾಂಗತಿಮ್ ॥** *(೧೬.೨೩)*

ಶಾಸ್ತ್ರ ಹೇಳುವ ಮಾರ್ಗವನ್ನನುಸರಿಸಿ ಲೋಕದಲ್ಲಿ ವ್ಯವಹರಿಸಬೇಕು. ಅದು ಬಿಟ್ಟು ತನ್ನಿಷ್ಟಬಂದಂತೆ ವ್ಯವಹರಿಸಿದರೆ ಅವನು ಜೀವನದಲ್ಲಿ ಹೊಂದಿರುವ ಗುರಿಯನ್ನು ಸಾಧಿಸದೆ ಹೋಗಿಬಿಡುತ್ತಾನೆ. ಅಷ್ಟೇ ಅಲ್ಲದೆ ಸುಖರಹಿತನಾಗಿ ಬಾಳಿನಲ್ಲಿ ಬಳಲುತ್ತಾನೆ. ಇನ್ನು ಜೀವನದ ಪರಮಗುರಿಯಾದ ಪರಮಾತ್ಮನ ನೆಲೆ, ದೂರದಲ್ಲೇ ಉಳಿಯುವುದು. **'ತಸ್ಮಾಚ್ಛಾಸ್ತ್ರಂ ಪ್ರಮಾಣಂ ತೇ'** – ಆದುದರಿಂದ ಶಾಸ್ತ್ರವನ್ನು ಆಧಾರವಾಗಿಟ್ಟುಕೊಂಡು ಮಾಡುವ ಕೆಲಸಗಳನ್ನು ಮಾಡು. ಶಾಸ್ತ್ರವು ನಿನಗೆ ವಿಧಿಸಿರುವ ಕೆಲಸಗಳನ್ನು ಎಂದೂ ಯಾವ ಕಾರಣಕ್ಕೂ ತ್ಯಜಿಸಬೇಡ. **(ನಿಯತಂ ಕುರು ಕರ್ಮ ತ್ವಂ ಕರ್ಮ ಜ್ಯಾಯೋ ಹಿ ಅಕರ್ಮಣಃ** *೩.೮*) ಆ ಕರ್ಮಗಳ ಆಚರಣೆಯ ಮೂಲಕ ದೊರೆತ ಫಲವನ್ನೂ (ಹಣವನ್ನೂ ಕೀರ್ತಿಯನ್ನೂ ಸ್ಥಾನ ಮಾನ ಮರ್ಯಾದೆಗಳನ್ನೂ) ಹಾಯಾಗಿ ಅನುಭವಿಸಿ ಸುಖಿಸು–ಎಂದು ಅದು ವಿಧಿಸುತ್ತದೆ.

### ಇಂದ್ರಿಯಗಳ ನಿಗ್ರಹ

ಆಸೆಗೆ ವಶನಾದ ಮಾನವ ವಸ್ತುಗಳ ಗುಲಾಮನಾಗುತ್ತಾನೆ. ಇಂದ್ರಿಯಗಳ ವಶನಾಗುತ್ತಾನೆ, ಅವು ಹೇಳಿದಂತೆ ವ್ಯವಹರಿಸುತ್ತಾನೆ. ಯುಕ್ತಾಯುಕ್ತ ಸರಿ ತಪ್ಪು ಧರ್ಮಾಧರ್ಮಗಳ ಕುರಿತಾದ ವಿವೇಕದ ಕಡೆಗೆ ಗಮನ ಹರಿಸುವುದಿಲ್ಲ. ಹೇಗಾದರೂ ಸರಿ ತನ್ನ ಬಯಕೆಯನ್ನು ಪೂರೈಸಿಕೊಳ್ಳಬೇಕು, ಎಂಬ ತುಡಿತಕ್ಕೆ ತವಕಕ್ಕೆ ಗುರಿಯಾಗುತ್ತಾನೆ. ಆದುದರಿಂದ ಗೀತೆ, **ತಸ್ಮಾತ್ತ್ವಮಿಂದ್ರಿಯಾಣ್ಯಾದೌ ನಿಯಮ್ಯ ಭರತರ್ಷಭ ಪಾಪ್ಮಾನಂ ಪ್ರಜಹಿ ಹ್ಯೇನಂ** *(೩.೪೧)* ಇಂದ್ರಿಯಗಳೆಂಬ ಕುದುರೆಗಳನ್ನು ಕಡಿವಾಣ ಹಾಕಿ ತಡೆಹಿಡಿಯದೇ ಹೋದರೆ, ಹಿಡಿತಕ್ಕೆ ನಿಲುಕದ ದುರಾಸದವಾದ ಕಾಮಕ್ಕೆ ವಶನಾಗಿ ಪಾಪಗಳ ಪರಂಪರೆಯನ್ನೇ ಮಾಡುತ್ತಾ ಸಾಗಬೇಕಾಗುತ್ತದೆ. ಅದಕ್ಕಾಗಿ ಮೊದಲು ಇಂದ್ರಿಯಗಳನ್ನು ನಿಯಂತ್ರಿಸು. ಆಗ ಸಹಜವಾಗಿಯೇ ಪಾಪಪ್ರೇರಕವಾದ ಈ 'ಕಾಮ' ತನ್ನಿಂದ ತಾನೇ ನಿಯಂತ್ರಿತವಾಗುತ್ತದೆ ಎಂದು ಸಂದೇಶವನ್ನು ನೀಡುತ್ತದೆ. ಇಲ್ಲದಿದ್ದರೆ ಇದು ವ್ಯಕ್ತಿಯಲ್ಲಿರುವ ಜ್ಞಾನವನ್ನು, ವಿಜ್ಞಾನವನ್ನು ಪೂರ್ಣ ಕಬಳಿಸಿ ಬಿಡುತ್ತದೆ.

### ಯಜ್ಞಭಾವ

ಇಂದ್ರಿಯಗಳು ತಮ್ಮ ಕೆಲಸ ಮಾಡಬೇಕು. ಕಣ್ಣು ನೋಡಬೇಕು, ಕಿವಿ ಕೇಳಬೇಕು... ಅವು ಮಂಗಳಮಯವಾದುದನ್ನೂ ಹಿತವಾದುದನ್ನೂ ಇತರರಿಗೆ ಬಾಧೆ ಉಂಟಾಗದಂತಹುದನ್ನೂ ಮಾಡಬೇಕು. ಅದಕ್ಕೆ ಬೇಕಾದುದು 'ಯಜ್ಞ' ದೃಷ್ಟಿ. ಯಜ್ಞ ಎಂದರೆ ವೇದಿಕೆಯಲ್ಲಿ ಅಗ್ನಿ ಸ್ಥಾಪಿಸಿ ಆಜ್ಯ ಸುರಿಯುವುದಲ್ಲ, ತ್ಯಾಗದ ದೃಷ್ಟಿ. ದೊಡ್ಡದಾದ ಏನೋ ತ್ಯಾಗವಲ್ಲ. ನಮ್ಮ ಮನದ 'ಸಹಸ್' ಶಕ್ತಿ, ಇಂದ್ರಿಯಗಳ 'ಓಜಸ್' ಶಕ್ತಿ, ಇವುಗಳನ್ನು ಸ್ವಲ್ಪ ಶಿಸ್ತುಬದ್ಧಗೊಳಿಸಿಕೊಳ್ಳುವುದು ಮತ್ತು ಅವುಗಳನ್ನು ನಿರ್ದಿಷ್ಟವಾದ ರೀತಿಯಲ್ಲಿ ಕಾರ್ಯ ನಿರ್ವಹಿಸುವಂತೆ ನಿರ್ದೇಶಿಸುವುದು. ಅಡೆ ತಡೆ ಇಲ್ಲದೆ ಹುಚ್ಚೆದ್ದು ಮಿತಿಮೀರಿ ಸಿಕ್ಕಿದಂತೆ ನುಗ್ಗಿ ಹಾವಳಿ ಮಾಡುತ್ತಿದ್ದ ನದಿಗೆ ಅಣೆಕಟ್ಟು ಹಾಕಿ ಅದರ ಗತಿವೇಗಗಳನ್ನು ನಿಯಮಿತಗೊಳಿಸಿದಲ್ಲಿ ಅದು ವಿದ್ಯುತ್ ಉತ್ಪಾದನೆಗೆ, ವ್ಯವಸಾಯಕ್ಕೆ, ನಾನಾ ವಿಧ ಅಭಿವೃದ್ಧಿಕಾರ್ಯಗಳಿಗೆ ಉಪಯೋಗಕ್ಕೆ ಬರುವುದಿಲ್ಲವೆ! ಅಂತೆಯೇ ಇಂದ್ರಿಯಗಳ ನಿಯಮನದಿಂದಲೂ ವೈಯಕ್ತಿಕ, ಸಾಮಾಜಿಕ, ರಾಷ್ಟ್ರೀಯ ಪ್ರಾಕೃತಿಕ ನೆಲೆಗಳಲ್ಲಿ ವಿಶೇಷ ಪ್ರಯೋಜನವನ್ನು ಸಾಧಿಸಬಹುದು.

ಇಂದ್ರಿಯ ಹೇಳಿದಂತೆ ನಡೆದ ನಡೆಯೇ ರೋಮನ್ ನಾಗರಿಕತೆಯು ಎರಡೇ ಶತಮಾನದಲ್ಲಿ ಹೆಸರೇ ಇಲ್ಲದಂತೆ ಅಳಿಸಿ ಹೋಗಲು ಕಾರಣವಾಯಿತು ಎಂಬುದನ್ನು ಇತಿಹಾಸ ತಿಳಿಸಿದೆ. ಆದುದರಿಂದ ಇವುಗಳ ನಿಯಮನಕ್ಕೆ **'ಬುದ್ಧೌ ಶರಣಮನ್ವಿಚ್ಛ'** ಎನ್ನುತ್ತದೆ ಗೀತೆ. ವಿವೇಕಕ್ಕೆ ಮೊರೆ ಹೋಗು. ವಿಶ್ಲೇಷಣೆ ಮಾಡು ನಿತ್ಯ–ಅನಿತ್ಯಗಳನ್ನು ಸುಖ–ದುಃಖಗಳನ್ನು ಲಾಭ– ನಷ್ಟಗಳನ್ನು ಕುರಿತು ಚಿಂತಿಸಿ ನಿರ್ಣಯಮಾಡಿ ಹೆಚ್ಚು ಜನತೆಗೆ ಹೆಚ್ಚು ಕಾಲಕ್ಕೆ ಹೆಚ್ಚು ಫಲ ಕೊಡಬಹುದಾದ ಮಾರ್ಗವನ್ನು ಆಯ್ದುಕೊಳ್ಳುವ ಜಾಣ್ಮೆಯನ್ನು ಆಶ್ರಯಿಸು.

'ಬುದ್ಧಿ ವಿವೇಕದ ಬಲದಿಂದ ಇಂದ್ರಿಯಗಳ ಮಟ್ಟ ಮೀರಿ ಬೆಳೆಯಬೇಕು. ನೀನು ಏರುವುದಕ್ಕೆ ನೀನು ಗೆಲ್ಲುವುದಕ್ಕೆ ಇನ್ನೂ ಎತ್ತರ ಎತ್ತರ ಎತ್ತರದ ನೆಲೆಗಳಿವೆ. ಮುಂದೆ ಸಾಗು, ಮುಂದೆ ಸಾಗು, ನಿಲ್ಲಬೇಡ, ಇದೇ ಸ್ತರದಲ್ಲಿ ನಿಂತು ಒದ್ದಾಡಬೇಡ. **'ನೈತತ್ತ್ವಯ್ಯುಪಪದ್ಯತೇ'** ಇದಿಷ್ಟೇ ನಿನ್ನ ಜ್ಞಾನ ಪಾಂಡಿತ್ಯ ಜಾಣ್ಮೆ ತಾಳ್ಮೆ ನೈಪುಣ್ಯ ಪ್ರತಿಭೆಗಳ ಫಲವಲ್ಲ. ನೀನು ಇನ್ನೂ ಇನ್ನೂ ಎತ್ತರದವನು, ನೀನು ಅನಂತ ಶಕ್ತಿಯ ಗಣಿ. ಅಪಾರ ಪ್ರಚಂಡ ಶಕ್ತಿಯ ನೆಲೆ' ಎಂದು ಗೀತೆ ವ್ಯಕ್ತಿಯನ್ನು ಪ್ರೋತ್ಸಾಹಿಸುತ್ತದೆ. ಜೀವಿಯ ಜೀವಿತದ ಆತ್ಯಂತಿಕ ಗುರಿ ಸಾಧಿಸುವೆಡೆಗೆ, ಸಾಧಿಸುವ ಮಿತಿಯೆಡೆಗೆ, ಪ್ರಸ್ಥಾನದೆಡೆಗೆ ಜೀವಿಯನ್ನು ಪ್ರಚೋದಿಸುತ್ತದೆ.

### ವ್ಯವಸಾಯಾತ್ಮಿಕಾಬುದ್ಧಿ – ಏಕಾಗ್ರತೆ

ಇದು ಅನುಭವವೇದ್ಯವಾಗಲು ನಮ್ಮ ಚದುರಿದ ಮನಶ್ಶಕ್ತಿ ಒಗ್ಗೂಡಬೇಕು. ಮನಸ್ಸು ಚೆದುರಿದ್ದರೆ ಶಕ್ತಿ ಸಂಚಯವಾಗುವುದಿಲ್ಲ. ಏಕಾಗ್ರಗೊಳಿಸಿದರೆ ಕ್ಷಕಿರಣದಂತೆ ಅದು ತನ್ನ ಅಪಾರ ಶಕ್ತಿಯನ್ನು ಪ್ರಕಟಿಸುತ್ತದೆ. ಎಲ್ಲ ಅಭೇದ್ಯ ಅಡಚಣೆಗಳನ್ನೂ ಭೇದಿಸಿಕೊಂಡು ಸಾಗುವ ಅಪರಿಮಿತ ಸಾಮರ್ಥ್ಯದೊಡನೆ ಧ್ಯೇಯ ಸಾಧಿಸುತ್ತದೆ. ಮನಸ್ಸು ಶಾಂತವಾಗಿ ಸಮತೋಲನದಲ್ಲಿದ್ದರೆ, ಉನ್ಮಾದ ಉದ್ರೇಕಗಳಿಗೆ ಒಳಗಾಗದಿದ್ದರೆ ನಮ್ಮ ಸುತ್ತಲ ಜಗತ್ತನ್ನೇ ನಮಗೆ ಬೇಕಾದಂತೆ ಪರಿವರ್ತಿಸಿಕೊಳ್ಳಬಲ್ಲ

ಶಕ್ತಿ ಅಲ್ಲಿ ಹುಟ್ಟುತ್ತದೆ. ಅದಕ್ಕಾಗಿ **‘ವ್ಯವಸಾಯಾತ್ಮಿಕಾ ಬುದ್ಧಿ ರೇಕೇಹ ಕುರುನಂದನ’** *(೨.೪೧)* ಎಂದು ಗೀತೆ ಶಾಸಿಸುತ್ತದೆ. ‘ವ್ಯವಸಾಯ’ ಎಂದರೆ ಪ್ರಯತ್ನಶೀಲತೆ, ಕ್ರಮ, ಪ್ರಬಲ ಇಚ್ಛಾ ಶಕ್ತಿ ಈ ಎಲ್ಲವನ್ನೂ ಸರಿಯಾದ ಪ್ರಮಾಣದಲ್ಲಿ ಒಗ್ಗೂಡಿಸಿ ‘ಕಾರ್ಯೋನ್ಮುಖ’ವಾಗುವುದು.

ಸ್ವಾಮಿ ವಿವೇಕಾನಂದರು ಅಮೆರಿಕದಲ್ಲಿದ್ದಾಗ, ಒಂದು ದಿನ ಕೆಲವು ಹುಡುಗರು ಶೂಟ್ ಮಾಡುವುದನ್ನು ಅಭ್ಯಾಸ ಮಾಡುತ್ತಿದ್ದುದನ್ನು ನೋಡಿದರು. ಒಂದು ಹರಿಯುವ ನೀರಿನಲ್ಲಿ ತೇಲುತ್ತಿರುವ ಮೊಟ್ಟೆಯ ಚಿಪ್ಪಿಗೆ ಗುರಿಯಿಡುವುದಕ್ಕೆ ಆ ಹುಡುಗರು ಪ್ರಯತ್ನಿಸುತ್ತಿದ್ದರು. ಅವರು ಎಷ್ಟು ಬಾರಿ ಪ್ರಯತ್ನಿಸಿದರೂ ಅವರಲ್ಲಿ ಯಾರೊಬ್ಬನೂ ಜಯಶೀಲನಾಗಲಿಲ್ಲ. ಸ್ವಾಮಿ ವಿವೇಕಾನಂದರು ಆ ಹುಡುಗರನ್ನು ಸಮೀಪಿಸಿ, ತಾನು ಪ್ರಯತ್ನಿಸಬಹುದೆ? ಎಂದು ಕೇಳಿದರು. ಹುಡುಗರಿಗೆ ಈ ಅಪರಿಚಿತನ ಶಕ್ತಿಯನ್ನು ಏಕಾಗ್ರತೆಯನ್ನು ಪರೀಕ್ಷಿಸುವ ಕುತೂಹಲ ವಾಯಿತು. ಅವರು ಅವರ ಕೈಗೆ ತಮ್ಮ ಕೈಯಲ್ಲಿದ್ದ ಬಂದೂಕನ್ನು ಕೊಟ್ಟರು. ಸ್ವಾಮೀಜಿ ಅನಾಯಸವಾಗಿ ನೀರಿನಲ್ಲಿ ತೇಲುತ್ತಿದ್ದ ಎಲ್ಲಾ ಮೊಟ್ಟೆ ಚಿಪ್ಪುಗಳಿಗೂ ಒಂದೊಂದಾಗಿ ಗುರಿಯಿಟ್ಟು ಹೊಡೆದು, ಅವುಗಳನ್ನು ಕ್ಷಣಮಾತ್ರದಲ್ಲಿ ಪುಡಿ ಮಾಡಿದ್ದರು. ಆಶ್ಚರ್ಯಗೊಂಡ ಹುಡುಗರು ಅವರು ಎಷ್ಟು ಕಾಲದಿಂದ ಈ ಶೂಟಿಂಗ್ ಅಭ್ಯಾಸ ಮಾಡಿರುವರು ಎಂದು ಸ್ವಾಮೀಜಿಯವರನ್ನು ಪ್ರಶ್ನಿಸಿದರು. ಸ್ವಾಮೀಜಿ ನಗುತ್ತಾ ತಾನು ಇದೇ ಮೊದಲ ಬಾರಿಗೆ ಬಂದೂಕನ್ನು ಕೈಯಲ್ಲಿ ಹಿಡಿಯುತ್ತಿರುವುದು ಎಂದರು. ಹಾಗಾದರೆ ಅವರ ಯಶಸ್ಸಿನ ರಹಸ್ಯ ಏನು? ಎಂದು ಮತ್ತೆ ಆ ಹುಡುಗರು ಪ್ರಶ್ನಿಸಲು ಸ್ವಾಮೀಜಿ ಕೊಟ್ಟ ಉತ್ತರ – ಪ್ರಬಲ ಇಚ್ಛಾಶಕ್ತಿ – ಅದು ಮನಸ್ಸು ಬುದ್ಧಿಗಳನ್ನು ಕ್ರಮಗೊಳಿಸುತ್ತದೆ, ಏಕಾಗ್ರಗೊಳಿಸುತ್ತದೆ. ಅದೇ ವ್ಯವಸಾಯಾತ್ಮಿಕಾ ಬುದ್ಧಿ

ತನ್ನ ಹೊಲಕ್ಕೆ ಕಾಲುವೆಯನ್ನು ನಿರ್ಮಿಸುತ್ತಿದ್ದ ರೈತನ ಉದಾಹರಣೆಯನ್ನು ಶ್ರೀರಾಮಕೃಷ್ಣರು ಕೊಡುತ್ತಾರೆ. ಮಧ್ಯಾಹ್ನ ಆಯಿತು, ಮೈ ಬೆವರಿತು, ಆಯಾಸವಾಯಿತು, ಹಸಿವಾಯಿತು, ಮನೆಯವರು ಬಂದು ಕರೆದರು — ಈ ಯಾವ ನೆಪಗಳಿಗೂ ವಶನಾಗದೆ, ಕೆಲಸ ಮಧ್ಯದಲ್ಲೇ ನಿಲ್ಲಿಸದೆ ಕಾರ್ಯನಿರತನಾದವನ ಹೊಲಕ್ಕೆ ಕಾಲುವೆ ನಿರ್ಮಾಣವಾಯಿತು. ನದಿ ನೀರು ಹೊಲಕ್ಕೆ ಹರಿದು ಉತ್ತಮ ಫಸಲು ದೊರಕಿತು. ಅದೇ ಈ ನೆಪಗಳಿಗೆ ಒಳಗಾಗಿ ಕೆಲಸ ನಿಲ್ಲಿಸಿದವರ ಕಾಲುವೆ ನಿಂತು ಹೋಯಿತು. ಅವರಿಗೆ ಸರಿಯಾದ, ದೊರಕಬೇಕಾದಷ್ಟು ಫಲ ದೊರಕಲಿಲ್ಲ ಎಂದು ಹೇಳಬೇಕಿಲ್ಲ.

ಈ ಸಂಕಲ್ಪಶಕ್ತಿ ಇಚ್ಛಾಶಕ್ತಿ ಏಕಾಗ್ರತೆ ಪ್ರತಿಯೊಬ್ಬನಲ್ಲೂ ಸಹಜವಾಗಿಯೇ ಇರುತ್ತದೆ. ಅದು ವ್ಯಕ್ತವಾಗಬೇಕಾದರೆ ಊರ್ಜಿತಗೊಳ್ಳಬೇಕಾದರೆ ಸ್ಥಿರವಾಗಿ ಉಳಿಯಬೇಕಾದರೆ, **‘ಅಭ್ಯಾಸೇನ ತು ಕೌಂತೇಯ’**, ಎಂದು ಗೀತೆ ಅಭ್ಯಾಸದಲ್ಲಿ ತೊಡಗಬೇಕೆಂದು ನಿರ್ದೇಶಿಸುತ್ತದೆ. ಏಕಾಗ್ರತೆಯಿಂದ ಮಾಡಿದ ಕೆಲಸ ಅತಿ ಸಣ್ಣದಿರಲಿ, ದೊಡ್ಡದಿರಲಿ ಅದು ಉತ್ಕೃಷ್ಟ ಫಲವನ್ನು ನೀಡುವುದು. ಅದೇ ವ್ಯಕ್ತಿಯನ್ನು ಅನಿರೀಕ್ಷಿತ ಉನ್ನತಮಟ್ಟಕ್ಕೆ ಕೊಂಡೊಯ್ಯಬಲ್ಲದು. ಮಾಡುವ ಕೆಲಸದಲ್ಲಿ ಮನಸ್ಸು ಬುದ್ಧಿಗಳನ್ನು ಪೂರ್ಣವಾಗಿ ಅರ್ಪಿಸಿಕೊಳ್ಳಬೇಕು, ಅದು ಮಾಡುವ ಕೆಲಸದಲ್ಲಿ ನೈಪುಣ್ಯತೆಯನ್ನು ಉತ್ತಮತೆಯನ್ನು ತಂದುಕೊಡುವುದು. ಅಲ್ಲದೆ ಅಧ್ಯಾತ್ಮ ಸಾಧನೆಯ ಮಾರ್ಗವಾಗಿ ವ್ಯಕ್ತಿ ತನ್ನ ಜೀವನದ ಉನ್ನತ ಪರಮನೆಲೆ ಸೇರಲೂ ಸಾಧಕವಾಗುತ್ತದೆ. ಹೀಗಾಗಿ ಏಕಾಗ್ರತೆ ಮತ್ತು ಅರ್ಪಿತತೆ ಒಬ್ಬ ವಿದ್ಯಾರ್ಥಿಯನ್ನು ಉತ್ತಮ ವಿದ್ಯಾರ್ಥಿಯನ್ನಾಗಿ ಒಬ್ಬ ಬೆಸ್ತನನ್ನು ಉತ್ತಮ ಬೆಸ್ತನನ್ನಾಗಿ ಮಾಡಬಲ್ಲದು.

## ಯಜ್ಞತತ್ತ್ವದ ವ್ಯಾಪಕತೆ

ಈ ಅರ್ಪಿತ ಮನೋಭಾವವನ್ನು ಗೀತೆ ‘ಯಜ್ಞ’ ಎನ್ನುತ್ತದೆ. ಇದು ದ್ರವ್ಯ, ತಪ, ದಾನ, ಜ್ಞಾನ ಹೀಗೆ ನಾನಾ ವಿಧವಾಗಿದೆ. ಅದರೆ ಈ ಎಲ್ಲ ವಿಧ ಯಜ್ಞದಲ್ಲೂ ಪ್ರಮುಖವಾಗಿರುವ ಅಂಶ ‘ತ್ಯಾಗ’ ಅಥವಾ ‘ಅರ್ಪಿತತೆ’. ಇದು ಸೃಷ್ಟಿಯಲ್ಲಿ ಸಹಜವಾಗಿರುವಂತಹುದು. ಬೀಜದ ಮೇಲಿನ ಸಿಪ್ಪೆ ನಾನು ನನ್ನತನವನ್ನು(ನನ್ನನ್ನು) ಏಕೆ ಬಿಡಲಿ? ಎಂದು ಬಲವಾಗಿ ಬೀಜಕ್ಕೆ ಕಚ್ಚಿಕೊಂಡಿದ್ದರೆ, ಬೀಜ ಗಿಡವಾಗಲು ಸಾಧ್ಯವಾಗುವುದೆ? ಸಿಪ್ಪೆ ಬೀಜಕ್ಕೆ, ಬೀಜ ಗಿಡಕ್ಕೆ, ಗಿಡ ಎಲೆಗೆ, ಎಲೆ ಹೂವಿಗೆ, ಹೂವು ಹೀಚಿಗೆ, ಹೀಚು ಕಾಯಿಗೆ... ಹೀಗೆ ಪರಸ್ಪರ ಒಂದಕ್ಕೆ ಒಂದು ತಮ್ಮನ್ನು ಅರ್ಪಿಸಿಕೊಂಡು ಇನ್ನೊಂದನ್ನು ಪೋಷಿಸಿದಾಗಲೇ ವಿಕಾಸ ಹಾಗೂ ಫಲ. ಹೀಗೆ ಇದು ಸೃಷ್ಟಿಯಲ್ಲಿ ಬೋಧಿಸುವ ಸಹಕಾರ ಧರ್ಮ, ತ್ಯಾಗ ಧರ್ಮ.

ಅದೇ ಸಂಗ್ರಹ ಬುದ್ಧಿ ಇಟ್ಟುಕೊಂಡು ನನಗೆ, ನನಗೆ, ನನಗೇ ಇರಲಿ ಎಂಬ ಭಾವದಲ್ಲಿದ್ದರೆ ಪೈರೂ ಇಲ್ಲ , ತೆನೆಯೂ ಇಲ್ಲ ಫಸಲೂ ಇಲ್ಲ, ಧಾನ್ಯವೂ ಇಲ್ಲ, ಆಹಾರವೂ ಇಲ್ಲ, ಪುಷ್ಟಿಯೂ ಇಲ್ಲ. ಇಂತಹ ಅಮೋಘವಾದ ಸರ್ವಸುಖಕರವಾದ, ಸುಖ ಶಾಂತಿ ತೃಪ್ತಿ ಆನಂದದಾಯಕವಾದ ಅನರ್ಘ್ಯ ಯೋಗದಾನ ‘ಯಜ್ಞಭಾವ’ವನ್ನು ಗೀತೆ ಲೋಕಕ್ಕೆ ಬೋಧಿಸಿ, ಅದರಂತೆ ಬದುಕಬೇಕೆಂದು ಆಶಿಸುತ್ತದೆ ಆಜ್ಞಾಪಿಸುತ್ತದೆ:

**ಸಹಯಜ್ಞಾಃ ಪ್ರಜಾಃ ಸೃಷ್ಟ್ವಾ ಪುರೋವಾಚ ಪ್ರಜಾಪತಿಃ ।**
**ಅನೇನ ಪ್ರಸವಿಷ್ಯಧ್ವಂ ಏಷ ವೋಽಸ್ತ್ವಿಷ್ಟಕಾಮಧುಕ್ ॥** *(೩.೧೦)*

ಇದು ಕೇವಲ ಮಾನವನಿಗೆ ಸೀಮಿತವಲ್ಲ. ಇದು ಇಡೀ ಭೂಮಂಡಲಕ್ಕೆ, ವಿಶ್ವವ್ಯಾಪಕವಾದ ವಿಶ್ವದ ಸುವ್ಯಸ್ಥೆಗೆ ಕಾರಣವಾಗುವ ವಿಶಾಲ ಆಯಾಮ ಹೊಂದಿದೆ. ಕೊಂಡುಕೊಳ್ಳುವ ವ್ಯವಹಾರವನ್ನವಲಂಬಿಸಿ ಇಡೀ ವಿಶ್ವವಿದೆ. ನಮ್ಮದೇ ಶರೀರದಲ್ಲಿರುವ ನಮ್ಮ ಜ್ಞಾನೇಂದ್ರಿಯಗಳಾದ ಕಣ್ಣು ಕಿವಿ ಇತ್ಯಾದಿಗಳು ಒಂದಕ್ಕೆ ಒಂದು ಹೆಣೆದುಕೊಂಡು ಪರಸ್ಪರ ಯೋಗದಾನದ

ಮೇಲೆ ಇಡೀ ಶರೀರದ ಸ್ವಸ್ಥತೆಯ ಕಾಯ ನಿರ್ವಹಿಸುತ್ತವೆ. ಹಕ್ಕಿಗಳು ದುಂಬಿಗಳು ಜೇನುನೊಣಗಳು ಗೊತ್ತಿದ್ದೋ ಗೊತ್ತಿಲ್ಲದೆಯೋ ಸೃಷ್ಟಿವಿಕಾಸದ ವ್ಯವಸ್ಥೆಗೆ ಬೀಜಪ್ರಸರಣದ ಕ್ರಿಯೆಗೆ ಸಹಾಯಮಾಡುತ್ತಾ ವಿಶ್ವ ಸಂರಕ್ಷಣೆಗೆ ತಮ್ಮ ತಮ್ಮ ಕೊಡುಗೆ ನೀಡುತ್ತಿವೆ.

## ಶ್ರದ್ಧೆಯ ಸ್ಥಾನ

ಆದುದರಿಂದ ಮನುಷ್ಯನೂ ಈ ಯಜ್ಞದೃಷ್ಟಿಯಿಂದ ತನ್ನ ತನ್ನ ಪಾಲಿನ ಕೆಲಸ ಶ್ರದ್ಧೆಯಿಂದ ನಿರ್ವಹಿಸಿದರೆ, ತನ್ನನ್ನೂ ತನ್ನ ಕುಟುಂಬವನ್ನೂ ಸುಕ್ಷೇಮವಾಗಿರಿಸಬಲ್ಲ. ಜೊತೆಜೊತೆಗೆ ಸುಭದ್ರ ಸಮಾಜಕ್ಕೆ ಪೋಷಕನಾಗಬಲ್ಲ. ಹಾಗೂ ಸಮಾಜ ಸುಖ, ಶಾಂತಿ, ಸಮೃದ್ಧಿಗಳ ಆಗರವಾಗುವಂತೆ ಮಾಡಬಲ್ಲ. ಮಾನವನು ಮಾಡುವ ಕೆಲಸದಲ್ಲಿ ಅವನು ಹೊಂದಿರುವ ಶ್ರದ್ಧೆ ಅವನ ವ್ಯಕ್ತಿತ್ವವನ್ನೂ ಪ್ರತಿನಿಧಿಸುತ್ತದೆ ಎಂದು ಇಲ್ಲಿ ಹೇಳಿದೆ: **'ಶ್ರದ್ಧಾಮಯೋಽಯಂ ಪುರುಷಃ ಯೋ ಯಃ ಶ್ರದ್ಧಃ ಸ ಏವ ಸಃ'**. ಗೀತೆ ವ್ಯಕ್ತಿಯಲ್ಲಿರಬೇಕಾದ 'ಶ್ರದ್ಧೆ'ಯ ಕಡೆಗೂ ಒತ್ತು ನೀಡುತ್ತದೆ.

ಆಧ್ಯಾತ್ಮಿಕವಾದ ಸಾಧನೆಯಲ್ಲಿ ಗುರುವಾಕ್ಯದಲ್ಲಿ ಶಾಸ್ತ್ರವಾಕ್ಯಗಳಲ್ಲಿ ಪೂರ್ಣವಿಶ್ವಾಸ ಇಡಬೇಕಾದುದರ-ಅಂದರೆ ಶ್ರದ್ಧೆಯ-ಪೂರ್ಣ ಅಗತ್ಯ ಎಷ್ಟುಮಟ್ಟಿಗೆ ಇದೆಯೋ ತತ್ಸಮಾನ ಮಟ್ಟದ ಅಗತ್ಯತೆ ಲೌಕಿಕ ಜೀವನದಲ್ಲೂ ಶ್ರದ್ಧೆಗೆ ಇದೆ. ಈ ಶ್ರದ್ಧೆ ಮಾನವನ ದಿನ ನಿತ್ಯದ ಆಚಾರ, ವಿಚಾರ, ವ್ಯವಹಾರ, ನಡೆ-ನುಡಿ ಎಲ್ಲದರಲ್ಲೂ ಹೊಂದಿರುವ ಸ್ಥಾನವನ್ನು ಗೀತೆ ಹದಿನೇಳನೆಯ ಅಧ್ಯಾಯದಲ್ಲಿ ಸುವಿಸ್ತಾರವಾಗಿ ಪ್ರತಿಪಾದಿಸುತ್ತದೆ. ಅವನವನ ಸತ್ವಾದಿ ಗುಣಗಳನ್ನವಲಂಬಿಸಿ ಅವನು ಮಾಡುವ ದೇವಪೂಜೆ, ಸೇವಿಸುವ ಆಹಾರ, ಆಚರಿಸುವ ಯಜ್ಞ, ಎಲ್ಲದರಲ್ಲೂ ಶ್ರದ್ಧೆ ಮೂರು ವಿಧವಾಗಿರುತ್ತದೆ ಎಂದು ಹೇಳುತ್ತದೆ. ಇದರಲ್ಲಿ ತಾಮಸಿಕವಾದ ಶ್ರದ್ಧೆ ಮತ್ತು ಅಶ್ರದ್ಧೆಯಿಂದ ನಿರ್ವಹಿಸುವ ಕಾರ್ಯ ಎಲ್ಲ ಕಾಲಕ್ಕೆ ಎಲ್ಲ ಕಾರಣಕ್ಕೂ ನಿಷಿದ್ಧವಾದುದು. ಅದನ್ನು ಮನುಷ್ಯ ಬಿಡಬೇಕು. ರಾಜಸ ಶ್ರದ್ಧೆಯಿಂದ ಮೇಲೇರಲು ಪ್ರಯತ್ನಿಸಬೇಕು. ಅಸಚ್ಛ್ರದ್ಧೆಯಿಂದ ಮಾಡಿದ ದಾನ, ಯಜ್ಞ, ತಪಸ್ಸು ಇತ್ಯಾದಿ ಶ್ರೇಷ್ಠ ಕೆಲಸಗಳೇ ಆಗಿದ್ದರೂ ಅವು ಅಸತ್ ಎನಿಸಿಕೊಳ್ಳುತ್ತವೆ. ಅವು ಈ ಲೋಕದಲ್ಲಾಗಲೀ ಮುಂದಿನ ಲೋಕದಲ್ಲಾಗಲೀ ಉತ್ತಮ ಫಲವನ್ನು ಕೊಡಲಾರವು. ಆದುದರಿಂದ ಅವುಗಳನ್ನು ಬಿಡಲೇಬೇಕು ಎಂದು ಆದೇಶಿಸುತ್ತದೆ.

## ಅಧ್ಯಾತ್ಮ ವಿಚಾರ

ಉಳಿದೆರಡು ಪ್ರಸ್ಥಾನಗಳು ಪ್ರತಿಪಾದಿಸುವ ಅಧ್ಯಾತ್ಮ ತತ್ತ್ವಗಳಾದ ಸೃಷ್ಟಿ ಈಶ್ವರ ಜೀವಾತ್ಮ ಈ ವಿಚಾರಗಳ ಕುರಿತೂ ಗೀತೆ ತಿಳಿಸುತ್ತದೆ. ಹರಿದ ಹಳೆಯದಾದ ಉಪಯೋಗಿಸಲು ಬಾರದ ಬಟ್ಟೆಯನ್ನು ಕಳಚಿದಂತೆ ಆತ್ಮ ಒಂದು ಶರೀರದಿಂದ ಮತ್ತೊಂದು ಶರೀರವನ್ನು ಪ್ರವೇಶಿಸುತ್ತದೆ. ಆತ್ಮಕ್ಕೆ ಸಾವಿಲ್ಲ, ಶರೀರ ನಶಿಸಿ ಹೋಗುತ್ತದೆ. ಆತ್ಮವನ್ನು ಎಂತಹ ಜಲವೂ ಒದ್ದೆ ಮಾಡಲಾರದು, ಪ್ರಚಂಡವಾಗಿ ಪ್ರಜ್ವಲಿಸುವ ಅಗ್ನಿಯೇ ಆದರೂ ಸುಡಲಾರದು. ಜೀವಿ ಬೇರೆ ಬೇರೆ ಶರೀರಗಳನ್ನು ಧರಿಸಲು ಈ ಶರೀರವನ್ನು ತಾನು ಎಂದೂ, ಈ ಶರೀರದಲ್ಲಿ ನಡೆಯುತ್ತಿರುವ ಎಲ್ಲಾ ಕೆಲಸವನ್ನು ಮಾಡುತ್ತಿರುವವನೂ ತಾನು ಎಂದು ಭಾವಿಸಿರುವುದೇ ಕಾರಣವಾಗಿದೆ. ಪರಮಾತ್ಮ ಯಾರಿಗೂ ಈ ಕರ್ತೃತ್ವವನ್ನು ಕೊಟ್ಟಿಲ್ಲ. ಮಾಡಿದ ಕೆಲಸ ಕೆಟ್ಟದ್ದೋ ಅನೀತಿಯದೋ ಅಧರ್ಮದ್ದೋ ಅಂತೆಯೇ ಒಳ್ಳೆಯದೋ ಧರ್ಮದ್ದೋ ಪುಣ್ಯದ್ದೋ, ಅದನ್ನು ಮಾಡಿದವನು ನಾನು; ನಾನು ಎಂಬ ಭಾವವೇ ಜೀವಿಯನ್ನು ಈ ಮಾಯೆಗೆ ತನ್ಮೂಲಕ ಬೇರೆ ಬೇರೆ ಶರೀರ ಹೊಂದುವುದಕ್ಕೆ ಸಾಧಕವಾಗುತ್ತದೆ. ಆದುದರಿಂದ ಪರಮಾತ್ಮನೊಬ್ಬನೇ ಕರ್ತ, ಕರ್ತೃ ನೀನಲ್ಲ, ಆ ಎಲ್ಲವನ್ನೂ ಅವನಿಗೆ ಒಪ್ಪಿಸಿ ಹಾಯಾಗಿ ಈ ಶರೀರದಲ್ಲಿ ಕೆಲಸಗಳನ್ನು ಮಾಡುತ್ತಾ, ಶರೀರಯಾತ್ರೆ ಮುಗಿಸಿಕೋ ಎಂದು ಗೀತೆ ಜೀವಿಗೆ ಬಿಡುಗಡೆಯ ಮಾರ್ಗವನ್ನು ತಿಳಿಸುತ್ತದೆ. ಗೀತೆ ತಿಳಿಸುವ ಬಿಡುಗಡೆಯ ಅನೇಕ ಮಾರ್ಗಗಳು ಜ್ಞಾನಮಾರ್ಗ, ಧ್ಯಾನಮಾರ್ಗ, ಭಕ್ತಿಮಾರ್ಗ ಇತ್ಯಾದಿ.

ಜ್ಞಾನಮಾರ್ಗವನ್ನು ಆಶ್ರಯಿಸುವವರ ಅನುಕೂಲಕ್ಕಾಗಿ ಮಾಯೆಯ ಸ್ವರೂಪವನ್ನೂ, ಮಾಯೆಯನ್ನೂ, ಉಪಾಧಿಯಾಗಿ ಮಾಡಿಕೊಂಡು ಸೃಷ್ಟಿಕಾರ್ಯ ನಿರ್ವಹಿಸುತ್ತಿರುವ ಈಶ್ವರತತ್ತ್ವವನ್ನೂ ತಿಳಿಸುತ್ತದೆ. ಭಕ್ತಿಮಾರ್ಗವನ್ನು ಬಯಸುವವರಿಗಾಗಿ ಪರಮಾತ್ಮನ ಮಹಿಮೆ, ಪವಾಡ, ಪರಮ ಉನ್ನತ ಬಲ, ಶಕ್ತಿ ಐಶ್ವರ್ಯಾದಿಗಳ ಪರಿಚಯವನ್ನೂ ಮಾಡಿಕೊಡುತ್ತದೆ. ಪರಮಾತ್ಮನ ವಿಭೂತಿ ವೈಭವಗಳನ್ನೂ ಅವನ ಅನುಗ್ರಹ, ಕೃಪೆಯ ಪ್ರಭಾವವನ್ನೂ ತಿಳಿಸುತ್ತದೆ.

## ಉಪಸಂಹಾರ

ಹೀಗೆ ಮಾನವನ ಸರ್ವವಿಧ ಶ್ರೇಯಸ್ಸು ಪ್ರೇಯಸ್ಸುಗಳ ಸಾಧಕವಾಗಿ ಗೀತೆ ಅವನನ್ನು ಎಲ್ಲ ಹಂತಗಳಲ್ಲೂ, ಎಲ್ಲ ಕಾಲ ಎಲ್ಲ ಕ್ಷೇತ್ರ ಎಲ್ಲ ವಿಧಗಳಲ್ಲೂ ಪ್ರಗತಿ ಪಥದಲ್ಲಿ ಮುಂದೆ ಸಾಗಲು ಉತ್ತೇಜಿಸುತ್ತದೆ. ನಿಷಿದ್ಧವಾದವುಗಳನ್ನು ಮಾಡಬಾರದೆಂದು ಆಜ್ಞಾಪಿಸುತ್ತದೆ. ಭಂಡರನ್ನು ಸ್ವಲ್ಪ ಬೆದರಿಸಿಯೂ ಬೆದರಿಸುತ್ತದೆ. ಮಾನವ ಸುಖ ಶಾಂತಿ ನೆಮ್ಮದಿಗಳ ಜೀವನ ನಡೆಸಲು ಬೇಕಾದ ಯುಕ್ತಿ, ವಿಚಾರ, ಮಾರ್ಗದರ್ಶನಗಳನ್ನು ನೀಡುತ್ತದೆ. ಅವನ ಪಾರಮಾರ್ಥಿಕ ಬದುಕಿಗೆ ಅಗತ್ಯವಾದ ಸಕಲ ತತ್ತ್ವಜ್ಞಾನಗಳನ್ನೂ ಸಾಧನ ಕ್ರಮ ಹಾಗೂಮಾರ್ಗಗಳನ್ನೂ ಬೋಧಿಸಿ ಅವನನ್ನು ಆ ದಾರಿಯಲ್ಲಿ ಮುನ್ನಡೆಸುತ್ತದೆ. ಜೊತೆ ಜೊತೆಗೆ ಅವನೊಂದಿಗೆ ಸಂಪೂರ್ಣ ಸಮಾಜದ, ದೇಶದ ಹಾಗೂ ಇಡೀ ವಿಶ್ವಾಂಡದ ಸುಭದ್ರತೆಯ ಸಾಧಕವಾಗಿ ಸೃಷ್ಟಿ ಸಂರಕ್ಷಕವಾಗಿ ಗೀತೆ ಪ್ರಸ್ಥಾನತ್ರಯದಲ್ಲಿ ಒಂದಾಗಿ ತನ್ನ ಪಾತ್ರ ನಿರ್ವಹಿಸುತ್ತದೆ.